**(ಇಂದು ದಿಃ 19.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು)**

ಪಾಟೀ ಸವಾಲು ಃ- ಶ್ರೀ ವಿ ಎಸ್ ಪಿ ವಕೀಲರಿಂದ 2ನೇ ಎದುರುದಾರ ಪರ -

ನಾನು ಅರ್ಜಿದಾರರಿಗೆ ಚಿಕಿತ್ಸೆಯನ್ನು ನೀಡಿರುವುದಿಲ್ಲ. ನಾನು ಅರ್ಜಿದಾರರಿಗೆ ವಿಚಾರಣೆ ಮಾಡಿದಾಗ ಅವರು ಚಾಲಕನಾಗಿ ಕೆಲಸ ಮಾಡುತ್ತಿದ್ದೆ ಎಂದು ತಿಳಿಸಿದ್ದರು ಆದರೆ ಈಗ ಯಾವುದೇ ಕೆಲಸ ಮಾಡುವುದಿಲ್ಲ ಎಂದು ತಿಳಿಸಿರುತ್ತಾರೆ. ನಾನು ನ್ಯೂನತಾ ಪ್ರಮಾಣ ಪತ್ರ ನೀಡುವಾಗ ಯುನೈಟೆಡ್ ಆಸ್ಪತ್ರೆಯ ಗಾಯದ ಪ್ರಮಾಣ ಪತ್ರ ಮತ್ತು ಡಿಸಚಾರ್ಜ ಸಮರಿಯನ್ನು ಪರಿಶೀಲನೆ ಮಾಡಿರುತ್ತೇನೆ. ಅರ್ಜಿದಾರರಿಗೆ ಡಿಸಚಾರ್ಜ ಸಮಯದಲ್ಲಿ ನಿಯಮಿತವಾಗಿ ಚಿಕಿತ್ಸೆ ಪಡೆಯಲು ಸೂಚಿಸಲಾಗಿತ್ತು ಎಂದರೆ ಸರಿ. ಅರ್ಜಿದಾರರು ನನ್ನ ಸಮಕ್ಷಮ ಮುಂದುವರೆದ ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡಿರುವುದಿಲ್ಲ. ಅರ್ಜಿದಾರರ ಬಲ ಹುಮರಸ್ ಮೂಳೆ, ಬಲ ರೇಡಿಯಸ್ ಮತ್ತು ಎಡ ರೇಡಿಯಸ್ ಮೂಳೆ ಮುರಿತಗೊಂಡಿರುತ್ತದೆ. ಅರ್ಜಿದಾರರ ಮೂಳೆ ಮುರಿತಕ್ಕೆ ಅಳವಡಿಸಿದ ಸಲಕರಣೆಯನ್ನು ತೆಗೆಯದೇ ನ್ಯೂನತೆಯ ಪ್ರಮಾಣ ಅಳೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೂಳೆ ಮುರಿತಗಳು 3 ರಿಂದ 6 ತಿಂಗಳಲ್ಲಿ ಗುಣಹೊಂದುತ್ತವೆ. ಅರ್ಜಿದಾರರಿಗೆ ಶಾಶ್ವತ ಅಂಗನ್ಯೂನತೆ ಆಗಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ದೇಹದಲ್ಲಿ ಅಳವಡಿಸಿದ ಸಲಕರಣೆಯನ್ನು ತೆಗೆಯಲು ರೂ.60,000/- ಗಳ ಅವಶ್ಯಕತೆ ಇದೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಪಡೆಯಲು ಸಹಾಯ ಮಾಡುವ ಉದ್ದೇಶದಿಂದ ಹೆಚ್ಚಿನ ಪ್ರಮಾಣ ನ್ಯೂನತೆಯನ್ನು ನಮೂದಿಸಿ ಪ್ರಮಾಣ ಪತ್ರವನ್ನು ನೀಡಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ- ಶ್ರೀ ಎನ್ ಎಂ ಆರ್ ವಕೀಲರಿಂದ 1ನೇ ಎದುರುದಾರ ಪರ ಃ-

ಕೂಗಿಸಲಾಯಿತು ಬರಲಿಲ್ಲ, ಸಕಾರಣ ಕಂಡುಬರದಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಪ್ರಭಾರಿ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಮ್.ಎ.ಸಿ.ಟಿ., ಆಳಂದ.